UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
Email- librarian@uasbangalore.edu.in
10-07-2026
Friday

ವಿ ರೈತ ಮಿತ್ರ



■ ಮುಸುಕಿನ ಜೋಳದೊಂದಿಗೆ ಬೆಳೆಯಬಹುದಾದ ಅಂತರ ಬೆಳೆಗಳ ಬಗ್ಗೆ ಮಾಹಿತಿ ನೀಡಿ.

| ನಾರಾಯಣಸ್ವಾಮಿ ಕಲಬುರಗಿ

ಮುಸುಕಿನ ಜೋಳ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿರುವ ಆಹಾರದ ಬೆಳೆ. ಇದನ್ನು ವರ್ಷದ ಎಲ್ಲ ಕಾಲಗಳಲ್ಲಿಯೂ ಬೆಳೆಯಬಹುದು. ಮುಸುಕಿನ ಜೋಳದಲ್ಲಿ ಅಂತರ ಬೆಳೆಗಳಾಗಿ ದ್ವಿದಳ ಧಾನ್ಯಗಳಾದ ಅಲಸಂದೆ, ಸೋಯಾ ಅವರೆ ಮತ್ತು ಅವರೆ ಬೆಳೆಗಳನ್ನು 2:2 ಅನುಪಾತದಲ್ಲಿ ಬಿತ್ತಬಹುದಾಗಿದೆ ಅಥವಾ ಮುಸುಕಿನ ಜೋಳದ ಜೋಡಿ ಸಾಲುಗಳ ನಡುವೆ 2 ಸಾಲು ಉದ್ದು ಅಥವಾ ಹೆಸರನ್ನು ಅಂತರ ಬೆಳೆಗಳಾಗಿ ಬೆಳೆಯಬಹುದು. ಇದರಿಂದಾಗಿ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ ಮತ್ತು ಶೇ.18 ಜೋಳದ ಇಳುವರಿ ಹೆಚ್ಚಾಗುತ್ತದೆ.

| ಡಾ. ಕೆ.ಪಿ.ರಘುಪ್ರಸಾದ್ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆಪ್ ಮಾಡಿ

Vijayavani Pg.05

ಕೃಷಿ ಡಿಪ್ಲೊಮಾಗೆ ಅರ್ಜಿ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯ 2026-27ನೇ ಶೈಕ್ಷಣಿಕ ಸಾಲಿನ ಎರಡು ವರ್ಷದ ಸಾವಯವ ಮತ್ತು ನೈಸರ್ಗಿಕ ಕೃಷಿ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ. ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯದ ವತಿಯಿಂದ ನಡೆಸಲಾಗುವ ಈ ಕೋರ್ಸ್‌ಗೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಅಥವಾ ಅನುತ್ತೀರ್ಣ ಅಭ್ಯರ್ಥಿಗಳು ಕೂಡ ಅರ್ಜಿ ಸಲ್ಲಿಸಬಹುದಾಗಿದೆ. ಕೋರ್ಸ್‌ನ ಒಟ್ಟು ಶುಲ್ಕ 24,000 ರು.ಆಗಿದ್ದು, ಒಮ್ಮೆಗೆ ಪಾವತಿಸಬಹುದು ಅಥವಾ ಪ್ರತಿ ಸೆಮಿಸ್ಟರ್‌ಗೆ 6,000 ರು. ರಂತೆ ನಾಲ್ಕು ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆ ಜುಲೈ 6ರಿಂದ ಆರಂಭಗೊಂಡಿದ್ದು, ಆಗಸ್ಟ್ 7 ಸಂಜೆ 4 ಗಂಟೆಯೊಳಗೆ ಭರ್ತಿ ಮಾಡಿದ ಅರ್ಜಿ ಸಲ್ಲಿಸಬೇಕು.

Vishwavani Pg.02

ಕೃಷಿ ವಿವಿ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯದ ದೂರಶಿಕ್ಷಣ ಘಟಕವು 2026-27ನೇ ಸಾಲಿನಲ್ಲಿ ಸಾವಯವ ಹಾಗೂ ನೈಸರ್ಗಿಕ ಕೃಷಿ ಕುರಿತ ಎರಡು ವರ್ಷಗಳ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ. ವಿವಿಯ ದೂರಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು-65 ಅಥವಾ ವಿವಿ ವೆಬ್‌ಸೈಟ್‌ನಿಂದ ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

Vijayavani Pg.6Ac

■ **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ:** ಸಸ್ಯ ಸಂತೆ ಹಸಿರು ಉತ್ಸವ ಉದ್ಘಾಟನಾ ಸಮಾರಂಭ.



ಅತಿಥಿಗಳು: ಸಂಸದ ಡಾ. ಸಿ.ಎನ್. ಮಂಜುನಾಥ್, ಶಾಸಕ ಎಸ್. ಆರ್. ವಿಶ್ವನಾಥ್, ತೋಟಗಾರಿಕೆ ವಿವಿ ವಿಶ್ರಾಂತ ಡೀನ್ ಜಿ.ಎಸ್. ಕೆ.ಸ್ವಾಮಿ, ಡಾ.ಕೆ.ಆರ್.ವಾಸುದೇವ. ಸ್ಥಳ: ಯಲಹಂಕ ರಸ್ತೆ, ಯುಎಚ್‌ಎಸ್ ಆವರಣ, ಜಿಕೆವಿಕೆ. ಬೆಳಗ್ಗೆ 11ಕ್ಕೆ.

Udayavani Pg.02

ಧಾರವಾಡ: ಕುಲಪತಿ ನೇಮಕ

ಧಾರವಾಡ/ಗದಗ: ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಡೀನ್ ಪ್ರೊ. ಎನ್.ಬಿ.ಪ್ರಕಾಶ್ ಅವರು ನೇಮಕಗೊಂಡಿದ್ದಾರೆ.



ಪ್ರೊ.ಪ್ರಕಾಶ್

ಗದಗದ ಮಹಾತ್ಮ ಗಾಂಧಿಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) ವಿಶ್ವವಿದ್ಯಾಲಯದ ಕುಲಪತಿಯಾಗಿ ಪ್ರೊ. ಸುರೇಶ ವಿ. ನಾಡಗೌಡರ ಅವರು ನೇಮಕಗೊಂಡಿದ್ದಾರೆ.

Prajavani Pg.07

Lost for 158 yrs, rare alpine flower rediscovered



A rare purple-blue alpine flower, last collected in India by legendary British botanist Sir Joseph Dalton Hooker in 1867 in Sikkim, has been rediscovered after 158 years by the scientists of the Botanical Survey of India (BSI) in Arunachal Pradesh. BSI stated, Dr Sudhansu Sekhar Dash, Dr Subhajit Lahiri, and Monalisa Das "have rediscovered the rare alpine species Cyananthus hookeri CB Clarke after an extraordinary gap of 158 years" at Chuna Valley in Tawang district. "This is the first confirmed record from Arunachal Pradesh and the first collection in India since 1867, highlighting the immense botanical wealth of the Eastern Himalaya and reinforcing the importance of continued exploration and conservation of India's fragile alpine ecosystems," BSI added.

Times of India Pg.08

ಬಿಡಿಎಯಿಂದ ನಿಗಾ | ಎನ್‌ಜಿಒಗಳಿಂದ ಗಿಡಗಳ ಆರೈಕೆಗೆ ವಿಶೇಷ ಪ್ರಯತ್ನ

ಸಸಿಗಳಿಗೆ ನೀರುಣಿಸಿ ಪೋಷಿಸಲು ಡ್ರಿಪ್ ಸೌಲಭ್ಯ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಇತ್ತೀಚೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನೆಟ್ಟಿರುವ 15 ಲಕ್ಷ ಗಿಡಗಳನ್ನು ಉಳಿಸಿ ಬೆಳೆಸುವ ಸಂಬಂಧ ಸಸಿಗಳ ಬೆಳವಣಿಗೆಗೆ ಶಾಶ್ವತ ನೀರುಣಿಸುವ ವ್ಯವಸ್ಥೆಯನ್ನು ಕೈಗೆಗೊಂಡಿದೆ. ಇದಕ್ಕಾಗಿ ವಿವಿಧ ಹಂತಗಳಲ್ಲಿ ಕ್ರಮ ಕೈಗೊಂಡಿದ್ದು, ಹೊಸದಾಗಿ ಬೋರ್‌ವೆಲ್ ಕೊರೆಯಿಸುವ ಜತೆಗೆ ಡ್ರಿಪ್ ಸೌಲಭ್ಯವನ್ನು ಕಲ್ಪಿಸಿದೆ.

■ 3 ತಿಂಗಳ ಬಳಿಕ ಸಮಗ್ರ ಪರಿಶೋಧನೆಗೆ ನಿರ್ಧಾರ

ಜೂ.27ರಂದು ಕೆಂಪೇಗೌಡರ ಜಯಂತಿಯಂದು ಬಿಡಿಎ 15 ಲಕ್ಷ ಸಸಿಗಳನ್ನು ನೆಟ್ಟು ಗಿನ್ನೆಸ್ ದಾಖಲೆ ನಿರ್ಮಿಸಿತ್ತು. ಬನಶಂಕರಿ 6ನೇ ಹಂತ, ಶಿವರಾಮ ಕಾರಂತ ಹಾಗೂ ಕೆಂಪೇಗೌಡ ಲೇಔಟ್‌ಗಳಲ್ಲಿನ 279 ಸ್ಥಳಗಳಲ್ಲಿ 198.31 ಎಕರೆ ವಿಸ್ತೀರ್ಣದಲ್ಲಿ ಗಿಡಗಳನ್ನು ನೆಡಲಾಗಿತ್ತು. ಇವುಗಳಲ್ಲಿ ಕೆಲ ಸಾವಿರ ಸಸಿಗಳಿಗೆ ನೀರುಣಿಸಲು ಸಾಧ್ಯವಾಗಿರಲಿಲ್ಲ. ಇದನ್ನು ಗಮನಿಸಿರುವ ಪ್ರಾಧಿಕಾರವು ಮೇಲ್ವಿಚಾರಣೆ ವಹಿಸಿರುವ ಅಧಿಕಾರಿಗಳ ಮೂಲಕ ಅಂತಹ ಗಿಡಗಳಿಗೆ ಕಾಲಕಾಲಕ್ಕೆ ನೀರುಣಿಸಿ ಬೆಳವಣಿಗೆಗೆ ಅಗತ್ಯ ಕ್ರಮ ಕೈಗೊಳ್ಳುವ ಹೊಣೆಯನ್ನು ವಹಿಸಿದೆ.

ಕೆಂಪೇಗೌಡ ಬಡಾವಣೆಯ ಕೆಲ ಪ್ರದೇಶಗಳಲ್ಲಿ



ನೆಟ್ಟಿರುವ ಗಿಡಗಳಿಗೆ ನೀರು ಹಾಯಿಸಲು ಹೊಸದಾಗಿ ಡ್ರಿಪ್ ವ್ಯವಸ್ಥೆ ಮಾಡಲಾಗಿದೆ. ಇದಕ್ಕಾಗಿ ಕೊಳವೆಬಾವಿಯಿಂದ ನೀರಿನ ಸಂಪರ್ಕ ಪಡೆಯಲಾಗಿದೆ. ತೀವ್ರ ನೀರಿನ ಸಮಸ್ಯೆ ಎದುರಾಗುವ ಪ್ರದೇಶಗಳಿಗೆ ಹೊಸದಾಗಿ ಬೋರ್‌ವೆಲ್ ಕೊರೆಯಿಸಿ ನೀರು ಹಾಯಿಸಲು ಕ್ರಮ ಕೈಗೊಳ್ಳಲಾಗಿದೆ. ಜತೆಗೆ ಕೆಲ ಎನ್‌ಜಿಒಗಳಿಗೆ ಗಿಡಗಳ ಆರೈಕೆಯ ಜವಾಬ್ದಾರಿಯನ್ನು ವಹಿಸಲು ಬಿಡಿಎ ಆಯುಕ್ತರು ಸೂಚನೆ ನೀಡಿದ್ದಾರೆ.

ಬಿಡಿಎ ಕೈಗೊಂಡಿರುವ ಉಪಕ್ರಮಗಳ ಹೊರತಾಗಿಯೂ ಕೆಲವೆಡೆ ಗಿಡಗಳು ಒಣಗುತ್ತಿವೆ. ಮಳೆ ಬಾರದ ಕಾರಣ ಸಸಿಗಳಿಗೆ ನೀರುಣಿಸುವುದು ಕಷ್ಟವಾಗಿದೆ. ಆದರೆ, ಬಿಡಿಎ ಈ ಆರೋಪವನ್ನು ತಳ್ಳಿಹಾಕಿದ್ದು, ನೆಟ್ಟಿರುವ ಸಸಿಗಳು ಆರಂಭದಲ್ಲಿ ಒಣಗಿದರೂ ನಂತರದಲ್ಲಿ ಚೇತರಿಸಿಕೊಳ್ಳುತ್ತಿವೆ.

ಗಿಡಗಳಿಗೆ ನೀರುಣಿಸಲು ಕೈಗೊಂಡಿರುವ ಉಪಕ್ರಮ

- ಹೊಸದಾಗಿ 40 ಬೋರ್‌ವೆಲ್ ಕೊರೆಯಿಸುವಿಕೆ
- 15 ದಿನಕ್ಕೊಮ್ಮೆ ನೀರು ಹಾಯಿಸುವಿಕೆಗೆ ಕ್ರಮ
- ಜಲಮಂಡಳಿಯಿಂದ ಶುದ್ಧೀಕರಿಸಿದ ನೀರು ಬಳಸಲು ಚಿಂತನೆ
- ಒಣಗಿರುವ ಸಸಿಗಳ ಬದಲು ಹೊಸದಾಗಿ ಗಿಡ ನೆಡುವಿಕೆ
- ಶಾಲಾ-ಕಾಲೇಜು, ಸಾರ್ವಜನಿಕರಿಂದ ಗಿಡಗಳ ದತ್ತು
- ಎತ್ತರದ ಸಸಿಗಳಿಗೆ ಆಧಾರ ಕಂಬ ಅಳವಡಿಸುವುದು
- ಗಿಡ ನೆಟ್ಟ ಪ್ರದೇಶವನ್ನು ಪೀಪಲ್ಸ್ ಪ್ಲಾನೆಟ್ ವೇದಿಕೆಯಲ್ಲಿ ಜಿಯೋ ಫೆನ್ಸಿಂಗ್ ವ್ಯವಸ್ಥೆ

ನಿರಂತರವಾಗಿ ನಿಗಾ ವಹಿಸುವ ಮೂಲಕ ಹೆಚ್ಚಿನ ಗಿಡಗಳನ್ನು ಉಳಿಸಿಕೊಳ್ಳಲಾಗುವುದು. ಒಂದು ವೇಳೆ ಸಸಿಗಳು ಪೂರ್ಣವಾಗಿ ಒಣಗಿಹೋದಲ್ಲಿ ಮತ್ತೆ ಅದೇ ಸ್ಥಳದಲ್ಲಿ ಹೊಸದಾಗಿ ಗಿಡಗಳನ್ನು ನೆಡಲು ಕ್ರಮ ಕೈಗೊಳ್ಳಲಾಗುವುದು ಎಂಯ ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

Vijayavani Pg.03

ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ 'ಡಿಡಬ್ಲ್ಯುಆರ್ 162' ತಳಿ

ಇಂಡೋನೇಷ್ಯಾಕ್ಕೆ ಧಾರವಾಡ ಗೋಧಿ

ಪ್ರಜಾವಾಣಿ ವಾರ್ತೆ

ಧಾರವಾಡ: ಇಲ್ಲಿನ ಕೃಷಿ ವಿಶ್ವವಿದ್ಯಾಲಯ 1985ರಲ್ಲಿ ಅಭಿವೃದ್ಧಿಪಡಿಸಿದ 'ಡಿಡಬ್ಲ್ಯುಆರ್ 162' ಗೋಧಿ ತಳಿಯ ಸುಮಾರು 100 ಟನ್ ಬಿತ್ತನೆ ಬೀಜಗಳನ್ನು ಇಂಡೋನೇಷ್ಯಾಕ್ಕೆ ಪೂರೈಸಲು ಭಾರತ ಮುಂದಾಗಿದೆ. ಪ್ರಧಾನಿ ಮೋದಿ ಅವರು ಈಚೆಗೆ ಇಂಡೋನೇಷ್ಯಾಕ್ಕೆ ಭೇಟಿ ನೀಡಿದ ವೇಳೆ ಈ ಬಿತ್ತನೆ ಬೀಜ ಪೂರೈಕೆಯ ಒಪ್ಪಂದವಾಗಿದೆ.

ರಾಷ್ಟ್ರೀಯ ಆಹಾರ ಭದ್ರತೆ ಬಲ ಪಡಿಸುವ ಉದ್ದೇಶದಿಂದ ಇಂಡೋನೇಷ್ಯಾ ಸರ್ಕಾರವು, ಭಾರತೀಯ ಸಂಶೋಧನಾ ಸಂಸ್ಥೆಗಳು ಹಾಗೂ ಅಂತರರಾಷ್ಟ್ರೀಯ ಮೆಕ್ಸಿಜೋ ಮತ್ತು ಗೋಧಿ ಸುಧಾರಣಾ ಕೇಂದ್ರ ಅಭಿವೃದ್ಧಿಪಡಿಸಿದ ವಿವಿಧ ಗೋಧಿ ತಳಿಗಳನ್ನು ತನ್ನ ಉಷ್ಣವಲಯದ ಹವಾಮಾನಕ್ಕೆ ಹೊಂದಿಕೊಳ್ಳುತ್ತದೆಯೇ ಎಂದು ಪರೀಕ್ಷಿಸುವುದಕ್ಕಾಗಿ ತರಿಸಿಕೊಂಡಿತ್ತು. ಈ ಪರೀಕ್ಷೆಗಳಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ 'ಡಿಡಬ್ಲ್ಯುಆರ್ 162' ಗೋಧಿ ತಳಿಯು ಇತರ ತಳಿಗಳಿಗಿಂತ ಉತ್ತಮ ಇಳುವರಿ ಮತ್ತು ಗುಣಮಟ್ಟ ಕಾಯ್ದುಕೊಂಡಿರುವುದು ದೃಢಪಟ್ಟಿತು.



ಡಿಡಬ್ಲ್ಯುಆರ್ 162 ತಳಿ ಗೋಧಿ ಬೆಳೆ



ಇಂಡೋನೇಷ್ಯಾ ಸರ್ಕಾರವು 1999-2000ರಲ್ಲಿ ದೊಡ್ಡ ಪ್ರಮಾಣದ ಕ್ಷೇತ್ರ ಪರೀಕ್ಷೆಗಳಿಗಾಗಿ 'ಡಿಡಬ್ಲ್ಯುಆರ್ 162' ಗೋಧಿ ತಳಿಯ ಬೀಜಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಂಡಿತು. ಜೊತೆಗೆ, ಈ ತಳಿಯ ಕೃಷಿ ತಂತ್ರಜ್ಞಾನ ಮತ್ತು ನಿರ್ವಹಣೆಯ ಕುರಿತು ತಾಂತ್ರಿಕ ಮಾರ್ಗದರ್ಶನ ನೀಡಲು ಕೃಷಿ ವಿ.ವಿಯ ನಿವೃತ್ತ ನಿರ್ದೇಶಕ ಮಂಜುಳಾ.ಎನ್ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಪ್ರಧಾನಿ ಮೋದಿ ಭೇಟಿ ಸಂದರ್ಭದಲ್ಲಿ ಮಾಮಕತೆ ಒಪ್ಪಂದ
- 100 ಟನ್ ಬಿತ್ತನೆ ಬೀಜ ಪೂರೈಕೆ

ತುಕ್ಕು ರೋಗ ನಿರೋಧ ತಳಿ

'ಗೋಧಿ ತಳಿಶಾಸ್ತ್ರಜ್ಞ ಆರ್. ಆರ್. ಹಂಚಿನಾಳ ಅವರ ನೇತೃತ್ವದಲ್ಲಿ ಗೋಧಿ ಸುಧಾರಣಾ ಕಾರ್ಯಕ್ರಮದ ಮೂಲಕ ಅಭಿವೃದ್ಧಿಪಡಿಸಿದ 'ಡಿಡಬ್ಲ್ಯುಆರ್ 162' ಗೋಧಿ ತಳಿಯನ್ನು 1993ರಲ್ಲಿ ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿತ್ತು. ಈ ತಳಿಯು ಎಲೆ ತುಕ್ಕು ಹಾಗೂ ಕಾಂಡ ತುಕ್ಕು ರೋಗಗಳಿಗೆ ಪ್ರತಿರೋಧಕವಾಗಿದೆ. ಅಧಿಕ ಇಳುವರಿ, ಉತ್ತಮ ಗುಣಮಟ್ಟ, ಬೆಳೆ ಬೆಳವಣಿಗೆಯ ಸಂಪೂರ್ಣ ಅವಧಿಯಲ್ಲಿ ಉಷ್ಣ ಒತ್ತಡವನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ' ಎಂದು ಕೃಷಿ ವಿ.ವಿಯ ನಿವೃತ್ತ ನಿರ್ದೇಶಕ ಮಂಜುಳಾ.ಎನ್ ತಿಳಿಸಿದ್ದಾರೆ.

ಸಲಹೆಗಾರರಾಗಿ ಆಹ್ವಾನಿಸಿತು.

Prajavani Pg.07

CONSERVATION EFFORT

2nd Great Indian Bustard chick born via 'jumpstart'

KALYAN RAY
NEW DELHI, DHNS

The Union Environment Ministry on Thursday announced the birth of the second Great Indian Bustard chick in the wild using the "jumpstart" method, re-kindling hopes for the species' recovery in the grasslands of Kutch.

The chick was born on May 21 in Naliya, Gujarat, and has passed the critical 40-day survival mark, Union Environment Minister Bhupender Yadav said in a social media post.

According to a report released by the ministry, the number of GIBs in the wild in 2025 was nearly 130, which is almost the same as compared to the 2017-18 survey when the number was estimated at around 128.



A Great Indian bustard with its young one. PTI

Yadav said the total number of chicks born in captivity in Rajasthan at Sam and Ramdevra have reached to 98 and the project would soon be entering the rewilding phase.

The maiden success with this method came in March when the first GIB chick was born in Kutch. The approach involves replacing an infertile egg in the natural setting with an incubated one from a breeding centre.

For the first success, a captive-bred GIB egg from the conservation breeding programme was transported by road from Sam in Rajasthan to Naliya in Gujarat in a handheld portable incubator and was successfully replaced in the nest on March 22.

The chick, born four days later, made headlines. It learned to fly within three weeks, but didn't seem to have survived. The Gujarat forest department issued a statement by the end of April, confirming that the chick is believed to have been preyed upon by wild animals.

For the second jumpstart effort, the incubated egg was also sourced from Sam, sources said, adding that a third effort has also been made. But the details of the third attempt have been kept under wraps.

According to the GIB status report prepared by the Wildlife Institute of India, the species' detection, encounter rate, abundance and occupancy remained broadly stable since 2017.

▸ Bustard, Page 4

Deccan Herald Pg.01 & 04

2nd Great Indian Bustard...

Bustard, From Page 1

The GIB detections continue to be concentrated in relatively undisturbed, flat grassland-dominated areas without energy infrastructure, particularly in and around enclosures of the northern Desert National Park and Pokhran Range.

Native associated species such as chinkara and desert fox also showed stable population trends, while non-native and human-subsidised species, including nilgai, pig, and free-ranging dogs, exhibited increasing occupancy across the landscape, flagging the heightened need for GIB conservation.

The minister also announced that the pygmy hog - a tiny pig species currently found only in Assam - will be included in the list of critically endangered species to receive focused conservation support. Pygmy hogs were once abundant in the grasslands of the Himalayan foothills, from Uttar Pradesh to North Bengal to Assam. They were thought to have gone extinct by the 1960s, but a small population was rediscovered in Assam in 1971.

"Conservation issues concerning grassland species, particularly those found in the Brahmaputra and Dooars–Terai landscapes, including the greater one-horned rhinoceros and the pygmy hog, were discussed at length," Yadav posted after a meeting of the Standing Committee of the National Board for Wildlife in Coimbatore.

The minister also chaired key meetings of the National Tiger Conservation Authority, the Wildlife Institute of India and the Central Zoo Authority.

ಉತ್ಪಾದನಾ ವೆಚ್ಚ ಭಾರೀ ಪ್ರಮಾಣದಲ್ಲಿ ಏರಿಕೆ | ಸಂಕಷ್ಟದಲ್ಲಿ ಕೋಳಿ ಸಾಕಾಣಿಕೆದಾರರು

ಕೋಳಿ ಸಾಕಾಣಿಕೆಗೆ ಸಿಗದ ಪ್ರೋತ್ಸಾಹಧನ

• **ತಾವರೆಕೆರೆ:** ಕೋಳಿ ಸಾಕಾಣಿಕೆ ರಾಜ್ಯದ ಪ್ರಮುಖ ಕೃಷಿ ಆಧಾರಿತ ಉದ್ಯಮಗಳಲ್ಲಿ ಒಂದಾಗಿದ್ದು, ಸಾವಿರಾರು ರೈತರು ಹಾಗೂ ಭೂಹೀನ ಕುಟುಂಬಗಳಿಗೆ ಜೀವನೋಪಾಯ ಒದಗಿಸಿದೆ.

ಆದರೆ, ಇತ್ತೀಚಿನ ದಿನಗಳಲ್ಲಿ ಉತ್ಪಾದನಾ ವೆಚ್ಚ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿರುವುದರಿಂದ ಕೋಳಿ ಸಾಕಾಣಿಕೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಪ್ರತಿ ಕೆಜಿ ಕೋಳಿ ಉತ್ಪಾದನೆಗೆ 10 ರೂ. ಪ್ರೋತ್ಸಾಹಧನ ನೀಡುವಂತೆ ನಿರ್ಧಾರ ಕೈಗೊಂಡಿದ್ದರೂ, ಹಲವು ಖಾಸಗಿ ಒಪ್ಪಂದ ಕಂಪನಿಗಳು ಅದನ್ನು ರೈತರಿಗೆ ನೀಡುತ್ತಿಲ್ಲ ಎಂದು ರೈತರು ಆರೋಪಿಸಿದ್ದಾರೆ. ಕೋಳಿ ಆಹಾರ, ಹೊಟ್ಟು, ಇಂಧನ, ವಿದ್ಯುತ್, ಔಷಧಿ ಸೇರಿದಂತೆ ಎಲ್ಲಾ ಉತ್ಪಾದನಾ ವೆಚ್ಚಗಳು ಹೆಚ್ಚಾಗಿವೆ. ಹಿಂದೆ ಒಂದು ಟನ್ ಹೊಟ್ಟಿನ ಬೆಲೆ 6,500 ರೂ. ಇದ್ದದ್ದು ಈಗ 9,000 ರೂ.ಗೆ ಏರಿಕೆಯಾಗಿದೆ. ಕೋಳಿ ಶೆಡ್‌ಗಳಿಗೆ ಅಗತ್ಯವಿರುವ ಇಂಧನದ ದರವೂ 11 ಸಾವಿರ ರೂ.ನಿಂದ 25 ಸಾವಿರ ರೂ.ವರೆಗೆ ಏರಿಕೆಯಾಗಿದೆ. ಇದರಿಂದ ಉತ್ಪಾದನಾ ವೆಚ್ಚ ಹೆಚ್ಚಾಗಿದ್ದರೂ ರೈತರಿಗೆ ದೊರೆಯುವ ಸೇವಾ ಶುಲ್ಕದಲ್ಲಿ ಯಾವುದೇ ಹೆಚ್ಚಳವಾಗಿಲ್ಲ.

2021ರಲ್ಲಿ ಸರ್ಕಾರ ಪ್ರತಿ ಕೆಜಿ ಉತ್ಪಾದನೆಗೆ 6.20 ರೂ. ಸೇವಾ ದರ ನಿಗದಿಪಡಿಸಿತ್ತು. ಬಳಿಕ ಉತ್ಪಾದನಾ ವೆಚ್ಚ ಹೆಚ್ಚಿದ ಹಿನ್ನೆಲೆಯಲ್ಲಿ ಅದನ್ನು 10 ರೂ.ಗೆ ಹೆಚ್ಚಿಸಲು ಸರ್ಕಾರ ಆದೇಶ ಹೊರಡಿಸಿದೆ. ಆದರೆ ಹಲವು ಖಾಸಗಿ ಕಂಪನಿಗಳು ಇನ್ನೂ ಹಳೆಯ ದರದಲ್ಲೇ ಹಣ ಪಾವತಿಸುತ್ತಿದ್ದು, ಕೆಲವು ಕಂಪನಿಗಳು 2 ರಿಂದ 3 ರೂ. ಮಾತ್ರ ಹೆಚ್ಚುವರಿ ನೀಡುತ್ತಿವೆ ಎಂದು ರೈತರು ದೂರಿದ್ದಾರೆ. ಕೋಳಿ ಸಾಕಾಣಿಕೆಯನ್ನು ಇನ್ನೂ ಕೃಷಿ ಚಟುವಟಿಕೆಯಾಗಿ ಸಂಪೂರ್ಣವಾಗಿ ಪರಿಗಣಿಸದಿರುವುದರಿಂದ ವಿಮೆ ಸೇರಿದಂತೆ ಹಲವು ಸೌಲಭ್ಯಗಳು ರೈತರಿಗೆ ದೊರೆಯುತ್ತಿಲ್ಲ, ಮಳೆ, ರೋಗಬಾಧೆ ಅಥವಾ ಪ್ರಕೃತಿ ವಿಕೋಪದಿಂದ ಶೆಡ್‌ಗಳಿಗೆ ಹಾನಿಯಾದರೂ ಸಮರ್ಪಕ ಪರಿಹಾರ ಸಿಗುವುದಿಲ್ಲ ಎಂಬುದು ರೈತರ ಅಳಲು. ಅಖಿಲ ಕರ್ನಾಟಕ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ನಂಜುಂಡಯ್ಯ ಮಾತನಾಡಿ, ಉತ್ಪಾದನಾ ವೆಚ್ಚ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದರೂ ಕಂಪನಿಗಳು ಸರ್ಕಾರದ ಆದೇಶವನ್ನು ಪಾಲಿಸುತ್ತಿಲ್ಲ. ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ರೈತರಿಗೆ ನ್ಯಾಯ ಒದಗಿಸಬೇಕು. ಇಲ್ಲವಾದರೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ರಾಜ್ಯಾಧ್ಯಕ್ಷ ಚಂದ್ರಶೇಖರ್ ಹಾಸನ ಮಾತನಾಡಿ, ಸರ್ಕಾರ ಘೋಷಿಸಿರುವ 10 ರೂ. ಪ್ರೋತ್ಸಾಹಧನವನ್ನು ಎಲ್ಲ ಒಪ್ಪಂದ ಕಂಪನಿಗಳೂ ಕಡ್ಡಾಯವಾಗಿ ರೈತರಿಗೆ ನೀಡುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಕಂಪನಿಗಳ ವಿರುದ್ಧ ಹಾಗೂ ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ರಾಜ್ಯಮಟ್ಟದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕೋಳಿ ಸಾಕಾಣಿಕೆ ರೈತರು ಸರ್ಕಾರ ತಕ್ಷಣ ಮಧ್ಯಸ್ಥಿಕೆ ವಹಿಸಿ ಖಾಸಗಿ ಕಂಪನಿಗಳು ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮ ಕೈಗೊಳ್ಳಬೇಕು ಹಾಗೂ ಕೋಳಿ ಸಾಕಾಣಿಕೆಯನ್ನು ಕೃಷಿ ಚಟುವಟಿಕೆಯಾಗಿ ಪರಿಗಣಿಸಿ ವಿಮೆ, ಪರಿಹಾರ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ವಿಸ್ತರಿಸಬೇಕು ಎಂದು ಆಗ್ರಹಿಸಿದ್ದಾರೆ.



ರಾಜ್ಯಾದ್ಯಂತ ಹೋರಾಟ

ರಾಜ್ಯ ಸರ್ಕಾರ ಘೋಷಿಸಿರುವ ಪ್ರತಿ ಕೆಜಿ ಕೋಳಿ ಉತ್ಪಾದನೆಗೆ 10 ರೂ. ಪ್ರೋತ್ಸಾಹಧನವನ್ನು ಖಾಸಗಿ ಒಪ್ಪಂದ ಕಂಪನಿಗಳು ಕಡ್ಡಾಯವಾಗಿ ರೈತರಿಗೆ ನೀಡಬೇಕು. ಸರ್ಕಾರದ ಆದೇಶವನ್ನು ಪಾಲಿಸದ ಕಂಪನಿಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ಹಾಸನ ಆಗ್ರಹಿಸಿದ್ದಾರೆ. 2021ರಲ್ಲಿ ನಿಗದಿಪಡಿಸಿದ್ದ 6.20 ರೂ. ಸೇವಾ ದರದೇ ಹಲವು ಕಂಪನಿಗಳಲ್ಲಿ ಇನ್ನೂ ಮುಂದುವರಿದಿದ್ದು, ಕೆಲ ಕಂಪನಿಗಳು ಕೇವಲ 2?3 ರೂ. ಮಾತ್ರ ಹೆಚ್ಚುವರಿ ನೀಡುತ್ತಿವೆ. ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ 10 ರೂ. ಪ್ರೋತ್ಸಾಹಧನ ಜಾರಿಗೊಳಿಸದಿದ್ದರೆ ರಾಜ್ಯಾದ್ಯಂತ ಪ್ರತಿಭಟನೆ ಹಾಗೂ ಸತ್ಯಾಗ್ರಹ ಹಮ್ಮಿಕೊಳ್ಳುವುದಾಗಿ ಸಂಘ ಎಚ್ಚರಿಕೆ ನೀಡಿದೆ.

Hosadiganta Pg.07

ಕಾವೇರಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಒಣಗಿದ ಕಬ್ಬಿನ ಬೆಳೆ: ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಆತಂಕ

ನಾಲೆಗೆ ನೀರುಹರಿಸಿ ಬೆಳೆ ಸಂರಕ್ಷಿಸಿ

• **ಮಂಡ್ಯ:** ಕಾವೇರಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬೆಳೆದು ನಿಂತ ಬೆಳೆಗಳು ಒಣಗಲಾರಂಭಿಸಿದೆ. ರೈತರನ್ನು ರಕ್ಷಿಸಲು ತಕ್ಷಣ ನಾಲೆಗಳಲ್ಲಿ ನೀರು ಹರಿಸುವಂತೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಒತ್ತಾಯಿಸಿದರು.

ತಾಲೂಕಿನ ಸಂತೆಕಸಲಗೆರೆ ಬಳಿಯ ಭೂಮಿ ಸಿದ್ದೇಶ್ವರ ದೇವಸ್ಥಾನದ ಸುತ್ತಮುತ್ತ ಬೆಳೆದಿರುವ ಜಮೀನಿನಲ್ಲಿ ಒಣಗಿನಿಂತ ಕಬ್ಬಿನ ಬೆಳೆಯನ್ನು ರೈತರೊಂದಿಗೆ ವೀಕ್ಷಿಸಿದ ಬಳಿಕ ಜಮೀನಿನಲ್ಲೇ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರು ಸಾಲ ಮಾಡಿ ಕಬ್ಬು ಸೇರಿದಂತೆ ಇತರೆ ಬೆಳೆಗಳನ್ನು ಬೆಳೆಯುತ್ತಾರೆ. ಬೆಳೆದಿರುವ ಕಬ್ಬನ್ನು ಉಳಿಸಿಕೊಳ್ಳಲು ನಾಲೆಗಳಲ್ಲಿ ನೀರು ಹರಿಸುವಂತೆ ಕೇಳುತ್ತಿದ್ದರೂ ಅವರ ಮಾತನ್ನು ಕೇಳಿಸಿಕೊಳ್ಳದಂತೆ ಜನಪ್ರತಿನಿಧಿಗಳು ಅಧಿಕಾರಿಗಳು ಬೇಜವಾಬ್ದಾರಿಯಿಂದ ನಡೆದು ಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದರು.

ಕಬ್ಬು, ತೆಂಗು, ಅಡಿಕೆ ಸೇರಿದಂತೆ ಎಲ್ಲ ಬೆಳೆಗಳೂ ನೀರಿಲ್ಲದೆ ಒಣಗಲಾರಂಭಿಸಿವೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ರೈತರ ನೆರವಿಗೆ ಬಾರದ ಸರ್ಕಾರ ಮತ್ತು ಜನಪ್ರತಿನಿಧಿಗಳು ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕನ್ನಂಬಾಡಿ ಅಣೆಕಟ್ಟೆಯಲ್ಲಿ 86 ಅಡಿ ನೀರಿದೆ. ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆ ಇದ್ದಾಗಲೂ ವ್ಯವಸಾಯಕ್ಕೆ ನಾಲೆಗಳಲ್ಲಿ ನೀರು ಹರಿಸಲಾಗಿದೆ. ಹೀಗಿರುವಾಗ ಬೆಳೆ ರಕ್ಷಣೆ ಮಾಡಲು ಇವರಿಗೆ ಜವಾಬ್ದಾರಿ ಇಲ್ಲವೇ, ರೈತರ ಜಿವದ ಜೊತೆಗೆ ಚಲ್ಲಾಟವಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಈಗಾಗಲೇ ಸಾಕಷ್ಟು ಜಮೀನಿನಲ್ಲಿ ಬೆಳೆಯಲಾದ ಕಬ್ಬು ಒಣಗಲಾರಂಭಿಸಿದೆ. ಇರುವ ಅಲ್ಪ ಸ್ವಲ್ಪ ಬೆಳೆಯನ್ನಾದರೂ ಉಳಿಸಿಕೊಂಡು ಅವರ ಸಾಲ ಅಥವಾ ಬಡ್ಡಿಯನ್ನು ಕಟ್ಟಲು ಸಹ ಬಿಡದಂತೆ ರೈತರಿಗೆ ಸರ್ಕಾರ, ಜನಪ್ರತಿನಿಗಳು, ಅಧಿಕಾರಿಗಳು ನೀರು ಹರಿಸದೆ ತೊಂದರೆ ಕೊಡುತ್ತಿದ್ದಾರೆ ಎಂದು ದೂರಿದರು.

ಹೊಲ ಗದ್ದೆಗಳನ್ನು ನೋಡಬನ್ನಿ: ನೀರಿಲ್ಲದೆ ರೈತರ ಜಮೀನುಗಳು ಒಣಗುತ್ತಿವೆ. ಬೆಳೆ ಸಂಪೂರ್ಣ ಒಣಗಲಾರಂಭಿಸಿದೆ. ರೈತರು ತಲೆ ಮೇಲೆ ಕೈ ಹೊತ್ತು ಕುಳಿತಿದ್ದಾರೆ. ಸಾಲದ ಸುಳಿಗೆ ಸಿಲುಕಿ ಅವರ ಬದುಕು ಮೂರಾಬಟ್ಟೆಯಾಗಿದೆ. ಇಂತಹ ಸಂದರ್ಭದಲ್ಲಿ ಜನಪ್ರತಿನಿಧಿಗಳು ಐಪಾರಾಮಿ ಜೀವನವನ್ನು ಬಿಟ್ಟು ರೈತರ ಹೊಲ ಗದ್ದೆಗಳನ್ನು ಬಂದು ನೋಡಿ. ಆಗಲಾದರೂ ನಿಮ್ಮ ಮನಸ್ಸು ಕರಗಿ ರೈತರಿಗೆ ಸ್ಪಂಧಿಸುವ ಕೆಲಸ ಮಾಡಬಹುದೇನೋ ಎಂದು ಬೇಸರದಿಂದ ನುಡಿದರು.

ಪೂಜೆ ಮಾಡಲು ನೀರು ಸಂಗ್ರಹ ಮಾಡುತ್ತೀರಾ: ಕೃಷ್ಣರಾಜಸಾಗರದಲ್ಲಿ 64 ಅಡಿಗಿಂತ ಕೆಳಗಿನ ನೀರನ್ನು ಉಪಯೋಗಿಸಲು ಸಾಧ್ಯವಿಲ್ಲ, 74 ಅಡಿ ನೀರಿದ್ದರೆ ಅದನ್ನು ಕುಡಿಯುವ ಆಧ್ಯತೆಗಾಗಿ ಇಟ್ಟುಕೊಳ್ಳಬೇಕಿದೆ. ಆದರೆ ಕಟ್ಟೆಯಲ್ಲಿ 86 ಅಡಿ ನೀರು ಸಂಗ್ರಹವಾಗಿದೆ. ಹೀಗಿರುವಾಗ ಕೃಷಿಗೆ ನೀರು ಕೊಡಲು ಏನು ತೊಂದರೆ ಎಂದು ಪ್ರಶ್ನಿಸಿದ ಅವರು, ಹಿಂದೆ ಜೂನ್ ತಿಂಗಳಲ್ಲಿ ಕೆ.ಆರ್.ಎಸ್. ತುಂಬಿಸಿದ್ದೆವೆ ಎಂದು ಮುಖ್ಯಮಂತ್ರಿಗಳ ಪೂಜೆಗಾಗಿ ನೀರನ್ನು ಕಾಯ್ದಿರಿಸಿಕೊಂಡಿದ್ದೀರಾ? ಇದರಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆಯೇ ಹೊರತು ಅವರ ಬದುಕು ಹಸನಾಗಿಲ್ಲ ಎಂದರು.

ವಿ.ಸಿ.ನಾಲೆಯ ದುರಸ್ಥಿ ನೆಪ ಹೇಳಿಕೊಂಡು ನೀರು ಹರಿಸುತ್ತಿಲ್ಲ. ಬೇರೆ ನಾಲೆಗಳಿಗೂ ನೀರು ಹರಿಸುತ್ತಿಲ್ಲ. ಇಲ್ಲಿ ರೈತರು ಗಲಾಟೆ ಮಾಡುತ್ತಾರೆ ಎಂಬ ಉದ್ದೇಶ ಅವರದ್ದಾಗಿದೆ ಎಂದು ದೂರಿದರು. ಮುಖಂಡರಾದ ತಗ್ಗಹಳ್ಳಿ ಪ್ರಸನ್ನ ಸೇರಿದಂತೆ ಸುತ್ತಮುತ್ತಲ ಜಮೀನುಗಳ ರೈತರು ಉರಿ ಬಿಸಿಲಿನಲ್ಲೂ ಪತ್ರಿಗೋಷ್ಠಿಯಲ್ಲಿದ್ದರು.



ರೈತರಿಗೆ ಪುಡಿಗಾಸಿನ ಸಾಲ ಮನ್ನಾ ಬೇಡ

ರೈತರ ಸಾಲ ಮನ್ನಾ ಮಾಡುವ ಬಗ್ಗೆ ಚಿಂತನೆ ಮಾಡಿಲ್ಲ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಇವರಿಗೆ ಸಾಲ ಮನ್ನಾ ಮಾಡಿ ಎಂದು ಕೇಳಿದವರಾರು ಎಂದು ಪ್ರಶ್ನಿಸಿದ ಅವರು, ರೈತರ ಕೇವಲ 25 ರಿಂದ 30ಸಾವಿರದ ಪುಡಿಗಾಸಿನ ಸಾಲ ಮನ್ನಾ ಮಾಡುವುದು ಬೇಡ, ಬೆಳೆ ರಕ್ಷಣೆಗಾಗಿ ತಕ್ಷಣದಿಂದ ಎಲ್ಲಾ ನಾಲೆಗಳಲ್ಲೂ ನೀರು ಹರಿಸಿ, ಅವರ ಬೆಳೆಗೆ ಒಳ್ಳೆಯ ಬೆಲೆ ಕೊಡಿಸಿ. ಇದು ನೀವು ಅವರಿಗೆ ಮಾಡುವ ಉಪಕಾರ ಎಂದು ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಸವಾಲು ಹಾಕಿದರು.

ನೀರುಹರಿಸಲು ಕುಂಟು ನೆಪ

ಕಳೆದ ಮೇ 25ರಂದು ನಾಲೆಗಳಲ್ಲಿ ನೀರು ನಿಲ್ಲಿಸಲಾಗಿದೆ. ನಂತರ ಮಳೆ ಬಾರದೆ ಬಿಸಿಲಿಗೆ ಬೆಳೆ ಒಣಗಲಾರಂಭಿಸಿದೆ. ಇಂತಹ ಸಂದರ್ಭದಲ್ಲಿ ನಾಲೆಗಳಲ್ಲಿ ನೀರು ಹರಿಸುವಂತೆ ರೈತರು ಕೇಳಿದರೆ, ನಾಲಾ ದುರಸ್ಥಿಯ ಕುಂಟು ನೆಪ ಹೇಳುತ್ತಾರೆ. ಒಂದು ತಿಂಗಳ ಅವಽಯಲ್ಲಿ ನಾಲೆ ದುರಸ್ಥಿ ಮಾಡಿಕೊಳ್ಳಬೇಕಿತ್ತು. ಅದು ಬಿಟ್ಟು ನೀರುವ ಬಿಡುವ ಸಮಯಕ್ಕೆ ಸರಿಯಾಗಿ ನಾಲೆಗಳ ದುರಸ್ತಿ ನೆಪವೊಡ್ಡಿ ನೀರು ಹರಿಸಲು ಹಿಂದೇಟು ಹಾಕುತ್ತಾರೆ. ಇವರಿಗೆ ರೈತರ ರಕ್ಷಣೆ ಬೇಕಿಲ್ಲ. ಅವರಿಗೆ ಬೇಕಿರುವುದು ಕೇವಲ ಗುತ್ತಿಗೆದಾರರು ಮತ್ತು ಇಂಜಿನಿಯರ್‌ಗಳು. ಅವರಿಂದ ಇವರಿಗೆ ಕಿಕ್‌ಬ್ಯಾಕ್ ಬರುತ್ತೆ. ರೈತರಿಂದೇನೂ ಬರುವುದಿಲ್ಲ ಎಂದು ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಟೀಕಿಸಿದರು.

ವರ್ಗಾವಣೆ-ರಿಯಲ್ ಎಸ್ಟೇಟ್ ದಂಧೆ

ಕೆಲ ಜನಪ್ರತಿನಿಧಿಗಳು ಮುಂದಿನ ಚುನಾವಣಾ ಖರ್ಚಿಗಾಗಿ ಈಗಿನಿಂದಲೇ ಇಂಜಿನಿಯರ್‌ಗಳು, ಅಧಿಕಾರಿಗಳ ವರ್ಗಾವಣೆ ಮತ್ತು ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮೈಸೂರಿನ ಖ್ಯಾತ ಹೊಟೇಲ್‌ನಲ್ಲಿ ಕುಳಿತು ನೂರಾರೂ ರೂ. ಮೌಲ್ಯದ ಕಾಫಿ ಕುಡಿಯುತ್ತಿರುತ್ತಾರೆ. ಅವರಿಗೆ ರೈತರ ಕಷ್ಟ ಬೇಕಿಲ್ಲ, ಅಧಿಕಾರಿಗಳು ಹೇಳುವ ಒಳ್ಳೆಯ ಮಾತು ಕೇಳಿಕೊಂಡು ಬೆಂಬಲಿಗರ ನಡುವೆ ಕುಳಿತಿರುತ್ತಾರೆ ಎಂದು ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಮೂದಲಿಸಿದರು.

Hosadiganta Spl. Pg.01

ಜೂನ್‌ನಲ್ಲಿ 99.5 ಮಿಮೀ ಮಳೆ, ವಾಡಿಕೆಗಿಂತ ಶೇ.41ರಷ್ಟು ಕೊರತೆ | ಜುಲೈ 9 ದಿನದಲ್ಲೇ 96 ಮಿಮೀ ಮಳೆ, ಕೊರತೆ ಪ್ರಮಾಣ ಶೇ.15.2ಕ್ಕೆ ಇಳಿಕೆ | ವಾಡಿಕೆ ಪ್ರಕಾರ ಜು.9ಕ್ಕೆಲ್ಲಾ 230.4 ಮಿಮೀ ಮಳೆ ಆಗಬೇಕಿತ್ತು

ಜು.9ರವರೆಗೆ ದೇಶಾದ್ಯಂತ ಒಟ್ಟು 195.5 ಮಿಮೀ ಮಳೆ

ದೆಹಲಿ: ಜೂ.1ರಂದು ಕೇರಳಕ್ಕೆ ಬರಬೇಕಿದ್ದ ಮುಂಗಾರು, ಈ ಬಾರಿ ವಾಡಿಕೆಗಿಂತ 4 ದಿನಗಳು ತಡವಾಗಿ ಆಗಮಿಸಿತು. ಪರಿಣಾಮ, ಮುಂಗಾರು ಮಳೆ ಅವಧಿ ಜೂನ್‌ನಲ್ಲಿ ಶೇ.41ರಷ್ಟು ಮಳೆ ಕೊರತೆಗೆ ಕಾರಣವಾಗಿತ್ತು. ಆದರೆ, ಆ ಕೊರತೆಯನ್ನು ಒಮ್ಮೆಲೇ ನೀಗಿಸುವಂತೆ ಜುಲೈ ತಿಂಗಳಲ್ಲಿ ಮಳೆಯಾಗುತ್ತಿದೆ. ಅಲ್ಲದೇ, ಜುಲೈ 8ರ ವೇಳೆಗೆ ಇಡೀ ದೇಶವನ್ನು ಆವರಿಸಿಕೊಳ್ಳಬೇಕಿದ್ದ ಮುಂಗಾರು ಮಾರುತಗಳು, 9 ದಿನಗಳಷ್ಟು ಮುಂಚಿತವಾಗಿಯೇ(ಜೂ.29ರ ವೇಳೆಗೆಲ್ಲಾ) ತಮ್ಮ ಪ್ರತಾಪ ತೋರಲಾರಂಭಿಸಿದವು. ಪರಿಣಾಮವಾಗಿ ಪ್ರಸಕ್ತ ಮುಂಗಾರು ಅವಧಿಯಲ್ಲಿ ದೇಶದಲ್ಲಿ ಇಲ್ಲಿಯವರೆಗೆ(ಜು.9) ಒಟ್ಟಾರೆಯಾಗಿ 195.5 ಮಿಮೀ ಮಳೆಯಾಗಿದೆ.

ಆದರೆ, ವಾಡಿಕೆ ಪ್ರಕಾರ ಜು.9ರವರ ವೇಳೆಗೆಲ್ಲಾ 230.4 ಮಿಮೀ ಮಳೆ ಆಗಬೇಕಿತ್ತು. ಆ ಲೆಕ್ಕದಲ್ಲಿ ಪ್ರಸ್ತುತ ಮುಂಗಾರು ಅವಧಿಯಲ್ಲಿ ಶೇ.15.2ರಷ್ಟು ವಾಡಿಕೆ ಮಳೆಯಲ್ಲಿ ಕೊರತೆ ಉಂಟಾಗಿದೆ.

ಜುಲೈ ಮೊದಲ ವಾರದಲ್ಲೇ ದೇಶಾದ್ಯಂತ ವರುಣನ ಆರ್ಭಟ ಜೋರಾಗಿದೆ. ಪರಿಣಾಮವಾಗಿ ದೇಶದ ಬಹಳಷ್ಟು ಕಡೆ ದಾಖಲೆ ಪ್ರಮಾಣದಲ್ಲಿ ಮಳೆ ಸುರಿಯುತ್ತಿದೆ. ನದಿಗಳ ಹರಿವಿನ ಮಟ್ಟದಲ್ಲಿಯೂ 'ಏರಿಕೆ' ಕಾಣಬರುತ್ತಿದೆ. ಅಣೆಕಟ್ಟೆಗಳಿಗೂ ನೀರು ಹರಿದು ಬರಲಾರಂಭಿಸಿದೆ.

ಗಂಟೆಗೆ 70-80 ಕಿಮೀಗಳಷ್ಟು ವೇಗದಲ್ಲಿ ಬಿರುಗಾಳಿ ಬೀಸುತ್ತಾ ಬರುತ್ತಿರುವ ಮಳೆರಾಯನ ಆರ್ಭಟದ ಕಾರಣವಾಗಿ ಕೇರಳ, ಮಹಾರಾಷ್ಟ್ರ ಅರುಣಾಚಲ ಪ್ರದೇಶ, ಉತ್ತರಾಖಂಡ ಸೇರಿದಂತೆ ದೇಶದ ಹಲವೆಡೆ ಭೂಕುಸಿತವಾಗುತ್ತಿದೆ. ಪರಿಣಾಮ, ರಸ್ತೆ ಸಂಪರ್ಕಕ್ಕೆ-ರೈಲು ಸಂಚಾರಕ್ಕೆ ಅಡಚಣೆ ಆಗುತ್ತಿದೆ. ಹಲವಾರು ಜೀವಗಳೂ ಬಲಿಯಾಗಿವೆ.

ಈ ಬಾರಿ ಕೇರಳದ ಕರಾವಳಿ ಮೂಲಕ ತಡವಾಗಿ ಆಗಮಿಸಿದ ಮುಂಗಾರು ಮಾರುತಗಳು ದಕ್ಷಿಣ ಭಾರತದಲ್ಲಿ ಎಲ್ಲೂಸಲ್ಲದೇ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಭಾಗದಲ್ಲಿ ಮಳೆ ಸುರಿದೇ, ವೇಗವಾಗಿ ಸಾಗಿ ಹೋದ ಕಾರಣ ದಕ್ಷಿಣ ಭಾರತದಲ್ಲಿ ವಾಡಿಕೆಗಿಂತಲೂ ಮಳೆಯಲ್ಲಿ ಕೊರತೆಯಾಗಿದೆ. ಆದರೆ, ನೆರೆಯ ಮಹಾರಾಷ್ಟ್ರದಲ್ಲಿ ವರುಣ ಅವತರಿಸಿದ್ದಾನೆ. ಪರಿಣಾಮ ಳೆದ ವಾರದಿಂದಲೂ ಮಹಾರಾಷ್ಟ್ರದಲ್ಲಿ ಭಾರೀ ಮಳೆಯಾಗುತ್ತಿದೆ.

ಮುಂಗಾರು ಮಳೆ ಮಾರುತಗಳು ಅಲ್ಪಿಂದ ಉತ್ತರ ಭಾಗದಾದ್ಯಂತ ಹರಡಿಕೊಂಡಿವೆ. ರಾಜಸ್ಥಾನದ ಪೂರ್ವ ಭಾಗ, ಮಧ್ಯಪ್ರದೇಶ, ದೆಹಲಿ, ಹರಿಯಾಣ, ಪಂಜಾಬ್, ಜಮ್ಮು-ಕಾಶ್ಮೀರ, ಲಡಾಕ್, ಉತ್ತರಾಖಂಡ, ಬಿಹಾರ, ಅರುಣಾಚಲ ಪ್ರದೇಶ, ಉತ್ತರ ಪ್ರದೇಶದ ಕೆಲವೆಡೆ, ಪಶ್ಚಿಮ ಬಂಗಾಳ, ಒಡಿಶಾ ಹಾಗೂ ಅಸ್ಸಾಂ, ಮೇಘಾಲಯ ಸೇರಿದಂತೆ



ಮುಂಗಾರು ಆವಧಿಯಲ್ಲಿ ಕೃಷಿ ಚಟುವಟಿಕೆ. ಕೆಸರು ಗದ್ದೆ ಹದಗೊಳಿಸುವಿಕೆ ಮತ್ತು ಭತ್ತನಾಟಿ.



ಉತ್ತರ, ಪೂರ್ವ ಮತ್ತು ಈಶಾನ್ಯ ಭಾರತದ ಬಹುಭಾಗವನ್ನು ಮುಂಗಾರು ಮಾರುತಗಳು ಆವರಿಸಿಕೊಂಡಿರುವುದನ್ನು ತೋರುವ ಉಪಗ್ರಹ ಚಿತ್ರ.

ಈಶಾನ್ಯದ ರಾಜ್ಯಗಳಲ್ಲಿ ಭಾರೀ ವರ್ಷಧಾರೆಗೆ ಕಾರಣವಾಗಿದೆ.

ಜೂನ್‌ನಲ್ಲಿ ಕೇವಲ 99.5 ಮಿಮೀ ಮಳೆ ಸುರಿಸಿ, ವಾಡಿಕೆ

ಮಳೆ ಏರುಪೇರು: ಬಿತ್ತನೆಯಲ್ಲಿ ಹಿನ್ನಡೆ

ವಾಡಿಕೆ ಪ್ರಕಾರ ಜುಲೈ 9ರ ವೇಳೆಗೆಲ್ಲಾ ನೈಋತ್ಯ ಮುಂಗಾರು ಮಾರುತಗಳು ದೇಶವನ್ನೆಲ್ಲಾ ಆವರಿಸಿಕೊಂಡು ಏನಿಲ್ಲವೆಂದರೂ 230 ಮಿಮೀಗೂ ಅಧಿಕ ಪ್ರಮಾಣದಲ್ಲಿ ಮಳೆ ಸುರಿಸಬೇಕಿತ್ತು. ಆದರೆ, ಜೂನ್‌ನಲ್ಲಿ ಕೇವಲ 99.5 ಮಿಮೀ(ಶೇ.41 ಕೊರತೆ) ಮಳೆಯಾಗಿದ್ದರಿಂದ ದೇಶದಲ್ಲಿನ ಕೃಷಿ ಕ್ಷೇತ್ರಕ್ಕೆ ಗಣನೀಯ ಪ್ರಮಾಣದಲ್ಲಿ ಹೊಡೆತ ಬಿದ್ದಿದೆ. ವಾಡಿಕೆ ಪ್ರಕಾರ ಜು.9ರ ವೇಳೆಗೆಲ್ಲಾ ದೇಶದ ಕೃಷಿ ಕ್ಷೇತ್ರದಲ್ಲಿ ಮೊದಲ ಮುಂಗಾರು ಆವಧಿಯಲ್ಲಿ ಏನಿಲ್ಲವೆಂದರೂ 442 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಚಟುವಟಿಕೆ ನಡೆದಿರಬೇಕಿತ್ತು. ಆದರೆ, ಜು.9ರವರೆಗಿನ ಲೆಕ್ಕದಲ್ಲಿ ಕೇವಲ 350 ಲಕ್ಷ ಹೆಕ್ಟೇರ್ ಪ್ರದೇಶದಲ್ಲಷ್ಟೇ ಬಿತ್ತನೆಯಾಗಿದೆ. ಹಾಗಾಗಿ, 92 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಆಗಿಲ್ಲ. ಪರಿಸ್ಥಿತಿ ಹೀಗಯೇ ಮುಂದುವರಿದರೆ ಆಹಾರ ಧಾನ್ಯಗಳ ಕೊರತೆ ಎದುರಾಗಲಿದೆ ಎಂಬ ಮಾತುಗಳು ಕೃಷಿ ಕ್ಷೇತ್ರದಲ್ಲಿ ಕೇಳಿಬರುತ್ತಿವೆ. ಮುಂ ಗಾರು ಅವಧಿಯಲ್ಲಿ ದೇಶದಲ್ಲಿ ಮುಖ್ಯವಾಗಿ ಭತ್ತ, ರಾಗಿ, ಜೋಳ, ಗೋಧಿ ಮತ್ತಿತರ ಆಹಾರ ಧಾನ್ಯಗಳು ಹಾಗೂ ತೊಗರಿ, ಹೆಸರು, ಉದ್ದು ಕಡಲೆ ಮೊದಲಾದ ದ್ವಿದಳ ಧಾನ್ಯಗಳು ಮತ್ತು ನೆಲಗಡಲೆ, ಎಳ್ಳು ಸೂರ್ಯಕಾಂತಿ ಮೊದಲಾದ ಎಣ್ಣೆ ಕಾಳುಗಳ ಬಿತ್ತನೆ ನಡೆಯುತ್ತದೆ.

ಮಳೆಗೆ ಹೋಲಿಸಿದರೆ, ಶೇ.41ರಷ್ಟು ಕೊರತೆ ಮಾಡಿದ್ದ ಮುಂಗಾರು ಮಾರುತಗಳು, ಈಗ ಜುಲೈನಲ್ಲಿ ಮೊದಲ 9 ದಿನಕ್ಕೆಲ್ಲಾ 100 ಮಿಮೀಗಳಷ್ಟು ಮಳೆ ಸುರಿಸಿವೆ. ಪರಿಣಾಮ, ಜೂನ್‌ನಲ್ಲಿ ಉಂಟಾಗಿದ್ದ ಶೇ.41ರಷ್ಟು ಪ್ರಮಾಣದ ಕೊರತೆಯನ್ನು ಗಣನೀಯವಾಗಿ ತಗ್ಗಿಸಿದೆ. ಆ ಮೂಲಕ ಈ ಮುಂಗಾರು ಋತುವಿನಲ್ಲಿನ ಮಳೆ ಕೊರತೆ ಪ್ರಮಾಣವನ್ನು ಈಗ ಶೇ.15.2ಕ್ಕೆ ಇಳಿಸಿದೆ.

2011ರ ನಂತರದಲ್ಲಿ ಮುಂಗಾರು ಅವಧಿಯಲ್ಲಿ ಜು.9ರ ವೇಳೆಗೆ ದೇಶದಲ್ಲಿ ಇಷ್ಟೊಂದು ಪ್ರಮಾಣದ ಮಳೆ ಸುರಿದಿರುವುದು ಇದೇ ಮೊದಲ ಬಾರಿಯಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ತಿಳಿಸಿದೆ.

ಈ ಮಧ್ಯೆ, ಫೆಸಿಫಿಕ್ ಸಾಗರದಲ್ಲಿನ ಸೃಷ್ಟಿಯಾಗಿರುವ 'ಎಲ್ ನಿನೋ' ಚಂಡಮಾರುತದ ಕಾರಣದಿಂದಾಗಿಯೇ ದಕ್ಷಿಣ ಭಾರತ ಭಾಗದಲ್ಲಿ ಮಳೆ ಕೊರತೆಯಾಗಿದೆ. ಉತ್ತರ ಭಾರತದಲ್ಲಿ ಅತ್ಯಧಿಕ ಮಳೆಯಾಗುತ್ತಿದೆ. ಹಾಗೆಯೇ ಮುಂದಿನ ಸೆಪ್ಟೆಂಬರ್ ವರೆಗೂ ಇದೇ ಪರಿಸ್ಥಿತಿ ಮುಂದುವರಿಯಲಿದೆ ಎಂದು ಐಎಂಡಿ ಈ ಮೊದಲೇ ಹೇಳಿತ್ತು ಎಂಬುದು ಗಮನಾರ್ಹ.

Vishwavani Pg.08

Vishwavani Pg.11

ವಿಶ್ವವಾಣಿ ಬೆಂಗಳೂರು 10-07-2026 ಶುಕ್ರವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಆಲೂ ಬೋಂಡ ಹಾಗೂ ಮಾಸ್ಟರ್ ಶೆಫ್!

• ಮಾಯಾ ಬಾಲಚಂದ್ರ

ಉಂಡಾಡಿ ಗುಂಡಂಗೆ ಆಲೂಗೆಡ್ಡೆ ಬೋಂಡಾ ಅಂತ ನಾವು ಚಿಕ್ಕವರಿದ್ದಾಗ, ತಿಂಡಿ ಪೋತರನ್ನು ಕಿಟಾಯಿಸ್ದಿದ್ದ ದಿನಗಳು ನೆನಪಾದವು. ಇದಕ್ಕೆ ಕಾರಣ, ಅಮೆರಿಕದ ಮಾಸ್ಟರ್ ಶೆಫ್ ಸ್ಪರ್ಧೆಯಲ್ಲಿ ಉರುಳದೆ ದೃಢವಾಗಿ ನಿಂತ ದಕ್ಷಿಣ ಭಾರತದ ಆಲೂ ಬೋಂಡ. ಘಟಾನುಘಟಿ ತೀರ್ಪುಗಾರರ ಮುಂದಿದ್ದ ಮೇಜಿನ ಮೇಲಿಂದ ಗುಂಡಗಿನ ಬೋಂಡ ಕೆಳಗುರುಳುವ ಸಾಧ್ಯತೆ ಹೆಚ್ಚಿತ್ತು. ಹಾಗೆ ಉರುಳಿಸಲು ಬೇಕಾದ ಪುಶ್, ಬೋಂಡದ ಕರ್ತೃ ಏನಿಂದಲೇ ಸಿಕ್ಕಿತ್ತು. ಆದರೂ, ಅದರ ಬಣ್ಣ, ಮೇಲ್ಮೈ, ಪ್ರಸ್ತುತ ಪಡಿಸಿದ ರೀತಿ, ಸ್ವಾದ ಎಲ್ಲವುಗಳಿಂದ ಹಿಡಿದಿಡಲ್ಪಟ್ಟ ತೀರ್ಪುಗಾರರು ಅದನ್ನು ಉರುಳಲು ಬಿಡದೆ ಹಿಡಿದು ನಿಲ್ಲಿಸಿದರು. ದಕ್ಷಿಣ ಭಾರತದ ಆಲೂ ಬೋಂಡ ಎಂದು ತಾನು ಸಿದ್ಧಪಡಿಸಿದ ತಿನಿಸನ್ನು ತೀರ್ಪುಗಾರರ ಮುಂದೆ ಪ್ರಸ್ತುತಪಡಿಸಿದ, ಭಾರತೀಯ ಮೂಲದ ಶೆಫ್ ಐಶು ಚಲ್ಲಪ್ಪ ಧೈರ್ಯವನ್ನು ಎಲ್ಲರೂ ಕೊಂಡಾಡುತ್ತಿದ್ದಾರೆ.

ವಿಶ್ವದ ವಿವಿಧ ಖಾದ್ಯಗಳನ್ನು ಅದರ ಪೌಷ್ಟಿಕಾಂಶಗಳ ಫೋಟೊಗಳೊಂದಿಗೆ ಪ್ರಸ್ತುತಿ ಪಡಿಸಬೇಕಾದಂತಹ ವೇದಿಕೆಯದು. ಏಷಿಯಾ- ಪ್ಯಾಸಿಫಿಕ್ ತಂಡವನ್ನು ಪ್ರತಿನಿಧಿಸ್ದ ಐಶು, ಮಾಸ್ಟರ್ ಶೆಫ್ ಸ್ಪರ್ಧೆಯ ಒಂದು ನಿರ್ದಿಷ್ಟ ಹಾಗೂ ಮುಖ್ಯ ಸವಾಲನ್ನು ಎದುರಿಸಲು ಆಧರಿಸಿದ್ದು ಆಲೂ ಬೋಂಡವನ್ನು.

'ಇದನ್ನು ನೋಡಿದಾಗ ಮೊದಲ ಸಲಕ್ಕೆ ನಾವು ಭಾರತೀಯರು ಅಥವಾ ಭಾರತೀಯ ಮೂಲದವರು ಹೆಚ್ಚಿನ ಬಾರಿ ನಮ್ಮ ವಿಚಾರಗಳನ್ನು ಅನಾವರಣಗೊಳಿಸುವಾಗ ಪರಿಣಾಮಕಾರಿಯಾಗಿ ಹೇಳುವುದಿಲ್ಲ ಏಕೆ? ಅನ್ನುವ ಪ್ರಶ್ನೆ ಮೂಡಿತು. ಕಾರಣ, ನಾನಾಗಲೇ ಹೇಳಿದಂತೆ ಆ ಸ್ಪರ್ಧೆಯಲ್ಲಿ ಆಕೆ ತನ್ನ ಅಡುಗೆಯನ್ನು ಪ್ರಸ್ತುತಪಡಿಸಿದಾಗ ಅದರ ಬಗ್ಗೆ ನೀಡಿದ ಅಪೂರ್ಣ ಮಾಹಿತಿ. ಅಲ್ಲಿದ್ದ ತಜ್ಞರು, ಆಕೆ ಸಿದ್ಧಪಡಿಸಿದ ತಿನಿಸಿನಲ್ಲಿ ಇರಬಹುದಾದ ಪ್ರೊಟೀನ್ ಅಂಶವನ್ನು ಕೇಳಿದಾಗ ಆಕೆ ಸರಾಗವಾಗಿ ಇಲ್ಲ ಎಂದು ಹೇಳಿಬಿಟ್ಟಳು. ನಿಜವಾಗಿಯೂ ಆಲೂ ಬೋಂಡದಲ್ಲಿ ಪ್ರೊಟೀನ್ ಇಲ್ಲವೇ? ಇದು ಪ್ರಶ್ನೆ. ಆಲೂಗಡ್ಡೆಯಲ್ಲಿ ಅಲ್ಪ ಪ್ರಮಾಣದಲ್ಲಿ



ಪ್ರೊಟೀನ್ ಇದ್ದರೂ ಬೇಯಿಸಿದಾಗ ಅದು ಇನ್ನಷ್ಟು ಕಡಿಮೆ ಆಗಬಹುದು ಅದರೆ ಇಲ್ಲವೇ ಇಲ್ಲ ಅಂತ ಹೇಳುವ ಹಾಗೆ ಇಲ್ಲ. ಜೊತೆಗೆ ಈ ಬೋಂಡಾಗೆ ಮುಖ್ಯವಾಗಿ ಬಳಸುವ ಕಡಲೆ ಹಿಟ್ಟಿನಲ್ಲಿ 20% ವರೆಗೆ ಪ್ರೊಟೀನ್ ಇರುತ್ತದೆ. ಅದು ಎಣ್ಣೆಯಲ್ಲಿ ಕರಿದ ನಂತರವೂ ಸಹ ನಷ್ಟವಾಗದೆ ಉಳಿಯುತ್ತದೆ. ಅದು ಸ್ವಲ್ಪ ಬೇರೆ ಬೇರೆ ಅಂಶಗಳನ್ನು ಜೊತೆಗೆ ಸೇರಿಸಿಕೊಂಡು ಪೌಷ್ಟಿಕಾಂಶದ ದೃಷ್ಟಿಯಲ್ಲಿ ವಿಭಿನ್ನವಾಗಿ ಹಿಡಿಯಬಹುದು ಅಷ್ಟೇ.

ಇನ್ನು ತೆಂಗಿನಕಾಯಿ ಚಟ್ನಿ ಮತ್ತು ಪುದಿನಾ ಕೊತ್ತಂಬರಿ ಚಟ್ನಿಯಲ್ಲಿಯೂ, ಹೈ ಪ್ರೊಟೀನ್ ಅಲ್ಲದಿದ್ದರೂ ಆತ್ಮಲ ಪ್ರಮಾಣದಲ್ಲಿ ಅದರೂ ಪ್ರೊಟೀನ್ ಇದ್ದೇ ಇದೆ. ಅವೆಲ್ಲವನ್ನು ಸೇರಿಸಿ ಆಕೆ ನೀಡಿದ ತಟ್ಟೆಯಲ್ಲಿ ಪ್ರೊಟೀನ್ ಇಲ್ಲ ಎಂದು ಹೇಗೆ ನಿರ್ಧರಿಸಿದ್ದು? ಎಂದು ಗೊಂದಲವಾಯಿತು. ಸಂಯೋಗಿ ಗಮನಿಸಿದರೆ ಆಕೆ ನೀಡಿದ ಪ್ಲೇಟ್ ನಲ್ಲಿ ಕನಿಷ್ಠ 18%ರಿಂದ 20%ವರೆಗೆ ಪ್ರೊಟೀನ್ ಇದ್ದಿರಬಹುದು. ಅದರೂ ಪ್ರೊಟೀನ್ ಮತ್ತು



ಪೌಷ್ಟಿಕಾಂಶಗಳ ದೃಷ್ಟಿಯಿಂದ ಆಲೂ ಬೋಂಡ ಏನೂ ಅಲ್ಲ ಎನಿಸಿಕೊಂಡುಬಿಟ್ಟತು. ಕಾರ್ಬೋಹೈಡ್ರೇಟ್, ಫ್ಯಾಟ್, ಕೊಲೆಸ್ಟ್ರಾಲ್ ಇವುಗಳ ವಿಚಾರ ಬೇರೆ.. ಬಿಡಿ.

100 ಗ್ರಾಂ ಚಿಪ್ಸ್ ಪೊಟ್ಟಣದಲ್ಲಿ, ಎರಡು ಪರ್ಸೆಂಟ್‌ನಷ್ಟು ಅಥವಾ ಅದಕ್ಕಿಂತಲೂ ಕಡಿಮೆ ಪ್ರೊಟೀನ್ ಇದ್ದಾಗಲೂ, ಅದರಲ್ಲಿರುವ ಪ್ರೊಟೀನ್ ಅನ್ನೇ ಹೈಲೈಟ್ ಮಾಡಿ, ಅದು ಪ್ರೊಟೀನ್ ರಿಚ್ ಫುಡ್ ಪ್ಯಾಕ್ ಎಂದು ಮಾರಾಟ ಮಾಡುವ ಅಮೆರಿಕನ್ನರ ಮುಂದೆ, ನಮ್ಮ ಇಪ್ಪತ್ತು ಪರ್ಸೆಂಟ್ ಪ್ರೊಟೀನ್ ಇರುವ ಕಾಜು ಆಹಾರ ಕೇವಲ ರುಚಿಗಾಗಿ ಆಯ್ಕೆಯಾಯಿತು ಎನಿಸಿಕೊಂಡುಬಿಟ್ಟತು. ಆಲೂ ಬೋಂಡದಲ್ಲಿ ಪ್ರೊಟೀನ್, ನಾರಿನ ಅಂಶ, ವಿಟಮಿನ್ ಸಿ, ಕಾರ್ಬೋಹೈಡ್ರೇಟ್ ಎಲ್ಲವೂ ಇವೆ. ಭಾರತೀಯರ ಆಹಾರದಲ್ಲಿ, ಅದು ಒಂದು ಚಿಕ್ಕ ಸ್ನ್ಯಾಕ್ಸ್ ಸಹ ಆಗಿರಬಹುದು, ಅದರಲ್ಲಿ ಅವಶ್ಯ ಪೋಷಕಾಂಶಗಳು ಇದ್ದೇ ಇವೆ. ನಮ್ಮ ಆಹಾರ ಋತುಮಾನವನ್ನು ಆಧರಿಸಿ ನಿರ್ಧರಿಸಲ್ಪಡುತ್ತದೆ. ಹಾಗಾಗಿ ಪ್ರವಂಚದ ಬಹುತೇಕ ದೇಶಗಳಲ್ಲಿ ಬಹಳ ಹಿಂದೆ ಗುರುತಿಸಲ್ಪಟ್ಟ ದೊಡ್ಡ ದೊಡ್ಡ ಕಾಯಿಲೆಗಳು ನಮ್ಮ ದೇಶದಲ್ಲಿ ಇರಲೇ ಇಲ್ಲ. ಈಗ ಎಲ್ಲರೂ ಎಲ್ಲವನ್ನು ತಿನ್ನುತ್ತಿದ್ದಾರೆ. ಹಾಗಾಗಿ ಎಲ್ಲಾ ಕಾಯಿಲೆಗಳು ಎಲ್ಲಾ ಕಡೆಯೂ ಹರಡಿವೆ ಅಷ್ಟೇ.

ಭಾರತೀಯರಲ್ಲಿ ಮೌಲ್ಯೀಕರಣ ಮತ್ತು ದಾಖಲೀಕರಣಗಳು ಬಹಳ ಕಡಿಮೆ. ಶ್ರುತಿಯ ಮೂಲಕ ಗಳಿಸಿ, ಸ್ಮೃತಿಯಲ್ಲಿ ಉಳಿಸಿಕೊಂಡು ತಲೆಮಾರಿನಿಂದ ತಲೆಮಾರಿಗೆ ಜ್ಞಾನವನ್ನು ದಾಟಿಸುವ ನಿಸ್ಸೀಮ ಪರಂಪರೆಯ ಮೂಲ ನಮ್ಮದು. ಆದ ಕಾರಣ, ಬಾಹ್ಯದ ವಿಚಾರಗಳನ್ನು ಮೌಲ್ಯಕ್ಕೆ ಒಳಪಡಿಸುವ ಮನಸ್ಥಿತಿ ನಮಗೆ ಕಡಿಮೆ. ಇಂದಿಗೂ ಆ ನೆರಳಿನಲ್ಲಿ ನಾವಿದ್ದೇವೆ. ನಮ್ಮ ಪರಂಪರೆಯ ಉನ್ನತ ವಿಚಾರಗಳನ್ನು ಜಗತ್ತಿಗೆ ಮುಟ್ಟಿಸಬೇಕಾದರೆ, ಅಂಥ ಮನಸ್ಥಿತಿಯಿಂದ ಈಚೆ ಬರಲೇಬೇಕಿದೆ. ಇಲ್ಲಿ ಮಾಸ್ಟರ್ ಶೆಫ್‌ನ ಒಂದು ಮುಖ್ಯ ಸವಾಲನ್ನು ಆಕೆ ಗೆದ್ದಿರಬಹುದು. ಗೆದ್ದ ಮಾತ್ರಕ್ಕೆ ಎಲ್ಲವೂ ಸರಿಯಿತ್ತು ಅನ್ನುವ ನಿರ್ಧಾರಕ್ಕೆ ಬರಬೇಕಿಲ್ಲ. ಅಲ್ಲಿಯೂ ಸಾಪಡಿಸಿಕೊಳ್ಳಲು ಅನೇಕ ಅಂಶಗಳು ಉಳದಿರುತ್ತವೆ ಎನ್ನುವುದಕ್ಕೆ ಇದೇ ಸಾಕ್ಷಿ. ಹಾಗೆಯೇ ಸೋತ ಸಂದರ್ಭಗಳಲ್ಲಿ ಎಲ್ಲವೂ ತಪ್ಪಾಗಿತ್ತು ಅಂತಲೂ ಅಲ್ಲ ಎಷ್ಟೋ ವಿಚಾರಗಳು ಸರಿಯಾಗಿಯೇ ಇದ್ದು, ಒಂದೆರಡು ಅಂಶಗಳಲ್ಲಿ ಸೋಲನ್ನು ಕಾಣುವ ಸಾಧ್ಯತೆಯೇ ಹೆಚ್ಚು ಹಾಗಾಗಿ, ಸೋತಾಗ, ತಮ್ಮಿಂದ ಎಲ್ಲವೂ ತಪ್ಪಾಗಿ ಬಿಟ್ಟಿತ್ತು ಎನ್ನುವ ನಿರ್ಧಾರದಿಂದ ಮನಸ್ಸನ್ನು ಮುದುಡಿಸಿಕೊಳ್ಳುವ ಅಗತ್ಯವಿಲ್ಲ.

ಅವೆಲ್ಲ ಏನೇ ಆದರೂ, ನಮ್ಮ ಆಲೂ ಬೋಂಡವನ್ನು ನಮ್ಮ ಹುಡುಗಿ ಗೆಲ್ಲಿಸಿದ್ದಾಳೆ ಅಥವಾ ನಮ್ಮ ಆಲು ಬೋಂಡ ನಮ್ಮ ಹುಡುಗಿಯನ್ನು ಗೆಲ್ಲಿಸಿದೆ. ಮನೆಯಲ್ಲಿ ಡಯಟ್ ಕಾರಣಕ್ಕೆ ಆಲೂ ಬೋಂಡ ಮಾಡದ ತಮ್ಮ ಹೆಂಡತಿಯರಿಗೆ, ಆಲೂ ಬೋಂಡ ಗೆದ್ದ ವಿಡಿಯೋವನ್ನು ಪತಿಮಹಾಶಯರು ಮಿಷಿಯಿಂದ ಶೇರ್ ಮಾಡ್ತಿದ್ದಾರಂತೆ. ಇದು ಭಾರತದ ತಾಜಾ ಸುದ್ದಿ.